**ಸಾಕ್ಷಿಯನ್ನು ದಿನಾಂಕಃ 30-01-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ಈಗ ನನಗೆ 40 ವರ್ಷ ವಯಸ್ಸಾಗಿರುವುದು. ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ದಾವಾ ಐಟಂ ನಂ 3 ಇದರ ಸರ್ವೆ ನಂ 475 ಇರುವುದು. ಅದರ ವಿಸ್ತೀರ್ಣ 6 ಎಕರೆ 64 ಸೆನ್ಸ ಇರುವುದು. ನಾವು 3 ನೇ ದಾವಾ ಅಸ್ತಿಯನ್ನು ಖರೀದಿ ಮಾಡುವ ಮೊದಲು ಅದು ಸಾವಿತ್ರಮ್ಮ ಮತ್ತು ಉಮಾದೇವಿ ಇರವ ಹೆಸರಿನಲ್ಲಿತ್ತು. ಅದು ಅವರಿಬ್ಬರಿಗೆ ಅವರ ಅಪ್ಪನಿಂದ ಬಂದಿರುತ್ತದೆ. ಸಾವಿತ್ರಮ್ಮ ಹಾಗೂ ಉಮಾದೇವಿ ಇವರಿಗೆ ಒಬ್ಬ ಅಣ್ಣ ಇದ್ದನು ಅವರು ಈಗ ತೀರಿಕೊಂಡಿರುವರು ನನಗೆ ಅವರ ಹೆಸರು ಗೊತ್ತಿಲ್ಲ.

2. ದಾವಾ ಅಸ್ತಿ ಸಾವಿತ್ರಮ್ಮ ಹಾಗೂ ಉಮಾದೇವಿ ಇವರಿಗೆ ಯಾವ ರೀತಿ ಬಂತು ಎಂದು ನಾನು ವಿಚಾರ ಮಾಡಿದ್ದೇನೆ. ಅವರಿಬ್ಬರಿಗೆ ಕೊಟ್ರಗೌಡ ಎಂಬ ಸಹೋದರು ಇದ್ದರು ಅಂದರೆ ಸರಿ. ಕುಸುಮಾ ಎಂಬಾಕೆ ಕೊಟ್ರಗೌಡರ ಹೆಂಡತಿ ಅಂದರೆ ಸರಿ. ಆ ಬಗ್ಗೆ ನನಗೆ ಮಾಹಿತಿ ಇರುತ್ತದೆ ಅಂದರೆ ಸರಿ. ಕೊಟ್ರಗೌಡ ಮತ್ತು ಕುಸಮಾ ಇವರಿಗೆ ಮಕ್ಕಳು ಇರುವುದಿಲ್ಲ. ಕೊಟ್ರಗೌಡ ಮೃತ ಪಟ್ಟ ನಂತರ ಸಾವಿತ್ರಮ್ಮ ಹಾಗೂ ಉಮಾದೇವಿ ಇವರೊಂದಿಗೆ ಕುಸುಮಾ ಇವರೊಂದಿಗೆ ಮನಸ್ತಾಪ ಬಂದಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆ ರೀತಿ

ಮನಸ್ತಾಪ ಬಂದ ಕಾರಣ ಕುಸುಮಾರವರು ಗಂಡನ ಭಾಗವನ್ನು ಕೇಳಿ ಒಂದು ಕೇಸನ್ನು ಹಾಕಿದ್ದರು ಅಂದರೆ ನನಗೆ ಗೊತ್ತಿಲ್ಲ. ಅದು ಇದೇ ದಾವೆ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.

3. ನಾನು 3 ನೇ ದಾವಾ ಅಸ್ತಿಯನ್ನು ಖರೀದಿಸಿದ ದಿನಾಂಕ ನನಗೆ ನೆನಪಿಲ್ಲ, 2016 ರಲ್ಲಿ ಖರೀದಿ ಆಗಿರುತ್ತದೆ. 3 ನೇ ದಾವಾ ಅಸ್ತಿಯನ್ನು ರೂ 60,000/-ಕ್ಕೆ ಖರೀದಿ ಮಾಡಿದ್ದೇನೆ. ಖರೀದಿ ಪತ್ರದಲ್ಲಿ ಈ ಕೇಸಿನ ಬಗ್ಗೆ ಉಲ್ಲೇಖ ಇರುವುದಿಲ್ಲ. ಉಮಾದೇವಿಯವರು ಪೊಸ್ಟ ಗ್ರಾಜುಯೇಟ್ ಅಂದರೆ ಸರಿ, ಅವರಿಗೆ ವ್ಯವಹಾರ ಜ್ಞಾನ ಇದೆ ಅಂದರೆ ಸರಿ. ನಾನು ಖರೀದಿ ಮಾಡುವ ಕಾಲಕ್ಕೆ ಯಾವುದಾದರು ಕೇಸುಗಳು ದಾವಾ ಅಸ್ತಿಗೆ ಸಂಬಂದ ಪಟ್ಟಂಟೆ ಬಾಕಿ ಇವೆಯೇ ಎಂದು ವಿಚಾರಿಸಿದ್ದೇನೆ ಆಗ ಅವರು ಯವುದೇ ದಾವೆ ಚಾಲ್ತಿಯಲ್ಲಿ ಇಲ್ಲ ಎಂದು ತಿಳಿಸಿದ್ದರು. ಅವರು ಕೇಸು ಇದ್ದ ವಿಚಾರವನ್ನು ನನ್ನಿಂದ ಮರೆ ಮಾಚಿರುವರು ಅಂದರೆ ನನಗೆ ಗೊತ್ತಿಲ್ಲ.

4. ದಾವೆ ಚಾಲ್ತಿಯಲ್ಲಿರುವಾಗ 1 ಮತ್ತು 2 ನೇ ಪ್ರತಿವಾದಿಯರು ಪೌತಿ ವಾರಸು ನೆಲೆಯಲ್ಲಿ ಖಾತೆ ಬದಲಾವಣೆ ಮಾಡಿಕೊಂಡು ನಾವೆಲ್ಲರೂ ಮಿಲಾಪಿಯಾಗಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಾನು ಸಾಲ ಮಾಡಿ 3 ನೇ ದಾವಾಅಸ್ತಿಯನ್ನು ಖರೀದಿ ಮಾಡಿದ್ದೇನೆ. ಸಾಲವನ್ನು ಸಹ ತೀರಿಸಿದ್ದೇನೆ. ಆ ವಿಚಾರವನ್ನು ಖರೀದಿ ಪತ್ರದಲ್ಲಿ ಉಲ್ಲೇಕಿಸಲು ತೊಂದರೆ ಇರಲಿಲ್ಲ. ಕುಸುಮಾರವರು ತನ್ನ ತಂಗಿಯ ಗಂಡನ ಹೆಸರಿಗೆ

ನೊಂದಾಯಿತ ಮರಣಶಾಸನವನ್ನು ಬರೆದಿರುವ ಕುರಿತಂತೆ ಈ ದಾವೆ ಇರುತ್ತದೆ ಅಂದರೆ ಸರಿಯಲ್ಲ.

5. ನನಗೆ ನ್ಯಾಯಾಲಯದಿಂದ ಸಮನ್ಸ ಬಂದ ನಂತರ ಈ ದಾವೆ ಇರುವ ವಿಚಾರ ಗೊತ್ತಾಗಿರುತ್ತದೆ. ದಾವೆಯ ಸಮನ್ಸ ಬಂದ ನಂತರ ನಾನು 1 ಮತ್ತು 2 ನೇ ಪ್ರತಿವಾದಿಯರನ್ನು ವಿಚಾರ ಮಾಡಿದಾಗ ನಾವು ಮತ್ತು ನನ್ನ ತಮ್ಮ ಚೆನ್ನಾಗಿದ್ದೆವು ಆಕೆ ಯಾರು ಎಂದು ನಮಗೆ ಗೊತ್ತಿಲ್ಲ ಎಂದು ಹೇಳಿದರು. ಕುಸುಮಳಿಗಾಗಲೀ ಆಕೆಯಿಂದ ಮರಣಶಾಸನದ ಪಲಾನುಭವಿಗಾಗಲೀ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕುಸುಮ ಅವರಿಗಾಗಲೇ ಪಲಾನುಭವಿಗಾಗಲೀ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದು ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಮಾಹಿತಿಯನ್ನೇ ಕೊಟ್ಟಿಲ್ಲ ಅಂದರೆ ಸರಿಯಲ್ಲ.

5. ಮರಣಶಾಸನವನ್ನು ಸೃಷ್ಟಿಸಿ ಕೇಸು ದಾಖಲೆ ಮಾಡಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಪೂರ್ವದಲ್ಲಿ ಈಗಿನ ವಾದಿ ಈ ಕೇಸಿನಲ್ಲಿ ವಾದಿಯಾಗಿದ್ದರು ಎಂಬ ವಿಚಾರ ನನಗೆ ಗೊತ್ತಿತ್ತು ಅಂದರೆ ಸರಿಯಲ್ಲ. ಆ ಕಾರಣ ಮರುಳಸಿದ್ದಪ್ಪ ಇವರಿಗೆ ಈ ದಾವೆಯನ್ನು ನಡೆಸುವ ಅಧಿಕಾರ ಇರುವುದಿಲ್ಲ ಎಂದು ನಾನು ಅಪಿಡವಿಟಿನಲ್ಲಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಕುಸುಮಾರವರಿಗೆ 3 ನೇ ದಾವಾ ಅಸ್ತಿಯಲ್ಲಿ

ತನ್ನ ಗಂಡನ ಹಿಸ್ಸೆಗೆ ಬರಬೇಕಾದ ಹಿಸ್ಸೆಗೆ ಅಧಿಕಾರ ಇತ್ತು ಅಂದರೆ ನನಗೆ ಗೊತ್ತಿಲ್ಲ. ಆ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. ನನಗೆ 3 ನೇ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಅಂದರೆ ಸರಿಯಲ್ಲ. ವಾದಿಯ ಹಕ್ಕನ್ನು ನಷ್ಟಗೊಳಿಸಲು ನಾವು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

30-01-2026
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 30.01.2026